**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10038/2021**

ಪಿಡಬ್ಲೂ–12

ಸಿಡಬ್ಲೂ–15

ಸಾಕ್ಷಿ ಹೆಸರು – ನೀಲೇಂದ್ರ ನಾಯ್ಕ

ತಂದೆ ಹೆಸರು – ಚಂದ್ರಶೇಖರ ನಾಯ್ಕ

ವಯಸ್ಸು – 45 ವರ್ಷ

ಉದ್ಯೋಗ – ಮುಖ್ಯ ಪೇದೆ ಶಿರಾಳಕೊಪ್ಪ

ವಾಸಃ – ಶಿರಾಳಕೊಪ್ಪ

**ಪ್ರಮಾಣ ವಚನ ಭೋದಿಸಿದ ದಿನಾಂಕಃ 27–06–2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು ಸೊರಬ ಪೋಲೀಸ್ ಠಾಣೆಯಲ್ಲಿ 2013 ರಿಂದ 2022 ರ ವರೆಗೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ10–06–2019 ರಂದು ಹೆಚ್ ಸಿ 687 ಶಿವಮೊಗ್ಗ ಮ್ಯಾಕ್ಸ್ ಆಸ್ಪತ್ರೆಯಿಂದ ಗಾಯಾಳುವಿನ ಹೇಳಿಕೆ ಪಡೆದು ತಂದು ಹಾಜರುಪಡಿಸಿದ್ದನ್ನು ಅದನ್ನು ಠಾಣಾ ಗುನ್ನೆ ನಂಃ 82/2019 ರ ರೀತ್ಯ ಪ್ರಕರಣವನ್ನು ದಾಖಲು ಮಾಡಿ ಪ್ರ ವ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಹೆಚ್ ಸಿ 687 ರವರಿಂದ ಸ್ವೀಕರಿಸಿದ ದೂರನ್ನು ಈಗಾಗಲೇ ನಿಪಿ –1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ –1(ಬಿ) ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿಪಿ –14 ಎಂದು ಸಾಕ್ಷಿಯ ಸಹಿಯನ್ನು ನಿಪಿ –14(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕಃ 30–6–2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಫ್ರಾ ಸಾ –2 ಮತ್ತು ಫ್ರಾ ಸಾ –3 ರವರ ಸಮಕ್ಷಮ ಫ್ರಾ ಸಾ –1 ರವರು

ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿದ್ದು ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ –2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ –2(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫ್ರಾ ಸಾ –1 ರವರು 2 ಕಲ್ಲು ಮತ್ತು 1 ದೊಣ್ಣೆಯನ್ನು ನನ್ನ ಮುಂದೆ ಹಾಜರುಪಡಿಸಿದ್ದು ಸದರಿ ಕಲ್ಲು ಮತ್ತು ದೊಣ್ಣೆಯನ್ನು ಆರೋಪಿತರು ತಮಗೆ ಹಲ್ಲೆ ಮಾಡಿರುವುದಾಗಿ ತಿಳಿಸಿ ಹಾಜರುಪಡಿಸಿರುತ್ತಾರೆ. ಅವುಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ –1 ರಿಂದ ಮು ಮಾ –3 ಎಂದು ಗುರುತಿಸಲಾಗಿದೆ.

ನಂತರ ಸ್ಥಳದಲ್ಲಿ ಸ್ಥಳದ ಕಚ್ಚಾ ನಕಾಶೆಯ ನ್ನು ತಯಾರಿಸಿರುತ್ತೇನೆ. ಸದರಿ ಕಚ್ಚಾ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ –15 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ –15(ಎ) ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿ ಫೋಟೋ ತೆಗೆಸಿರುತ್ತೇನೆ. 2 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ – 3 ಮತ್ತು ನಿಪಿ –4 ಎಂದು ಗುರುತಿಸಲಾಗಿದೆ. ಮು ಮಾ –1 ರಿಂದ ಮು ಮಾ –3 ನ್ನು ಪಿ ಎಫ್ ಗೆ ಅಳವಡಿಸಿಕೊಂಡಿರುತ್ತೇನೆ. ಫ್ರಾ ಸಾ –2, ಫ್ರಾ ಸಾ –4 ಮತ್ತು ಚಾ ಸಾ 11 ರವರ ಹೇಳಿಕೆಯನ್ನು ಪಡೆದಿದರುತ್ತೇನೆ. ಫ್ರಾ ಸಾ –2 ರವರು ನಿಪಿ –7 ಮತ್ತು ನಿಪಿ –7(ಎ) ರಂತೆ, ಫ್ರಾ ಸಾ –4 ರವರು ನಿಪಿ –8, 8(ಎ) ರಿಂದ 8(ಡಿ) ವರೆಗೆ ನನ್ನ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ.
ಸ್ಥಳ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ಸಿ ಡಿ ಗೆ ಅಳವಡಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಂತೆ ದೃಢೀಕರಣ ನೀಡಿರುತ್ತೇನೆ. ಸದರಿ ದೃಡೀಕರಣ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ –16 ಎಂದು ಸಾಕ್ಷಿಯ ಸಹಿಯನ್ನು ನಿಪಿ16(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದ ಸಂಪೂರ್ಣ ಕಡತವನ್ನು ಮುಂದಿನ ತನಿಖೆಗಾಗಿ ಪಿ ಎಸ್ ಐ ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸೊರಬದಲ್ಲಿ ಫ್ರಾ ಸಾ –1 ರವರು ಮೊದಲು ಯಾವುದೇ ದೂರನ್ನು ಕೊಟ್ಟಿರಲಿಲ್ಲ ಎಂದರೆ ಹೌದು. ಸಾಗರದಿಂದ ನಮ್ಮ ಠಾಣೆಗೆ ಎಂ ಎಲ್ ಸಿ ಯನ್ನು ಕ ಳಿಸಿರುತ್ತಾರೆ ಎಂದರೆ ಸರಿಯಲ್ಲ. ಫ್ರಾ ಸಾ –

1 ರವರು ಮು ಮಾ –1 ರಿಂದ ಮು ಮಾ –3 ನ್ನು ಎಲ್ಲಿಂದ ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಗಲಾಟೆಯಾದ ಬಗ್ಗೆ ಕುರುಹು ಇರಲಿಲ್ಲ ಎಂದು ಬರೆದಿದ್ದೇನೆ ಎಂದರೆ ಹೌದು. ಪ್ರಾ ಸಾ –2 ರವರು ನಿಪಿ –7 ರಂತೆ ಸಾಕ್ಷಿ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾ ಸಾ –4 ರವರು ನಿಪಿ –8 ರಂತೆ ಸಾಕ್ಷಿ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).